ಹಿಮಾಲಯ. ಮೌಂಟ್ ಎವರೆಸ್ಟ್. ಯಾವ ಹೆಸರಿನಿಂದಾದರೂ ಕರೆಯಿರಿ, ಕಣ್ಣಮುಂದೆ ನಿಲ್ಲುವುದು, 'ನಾನೇರುವೆತ್ತರಕೆ ನೀನೇರಬಲ್ಲೆಯಾ?' ಎಂದು ಸವಾಲೆಸೆಯುವ ಹಿಮಾಚ್ಛಾದಿತ ಗಗನಚುಂಬಿ ಪರ್ವತಶ್ರೇಣಿ. ಹಿಮಾಲಯ ಎನ್ನುವುದು ಪ್ರಕೃತಿಯ ರೌದ್ರ ಮತ್ತು ರಮಣೀಯತೆ ಎರಡಕ್ಕೂ ನಿದರ್ಶನದಂತಿದೆ. ಭಾರತೀಯರ ಪಾಲಿಗೆ ದಿವ್ಯವೂ ಪವಿತ್ರವೂ ಆದ 'ಮೌಂಟ್ ಎವರೆಸ್ಟ್' ಇತ್ತೀಚೆಗೆ ತನ್ನ ಎತ್ತರಕ್ಕೆ ಸಂಬಂಧಿಸಿದಂತೆ ಸುದ್ದಿಯಲ್ಲಿತ್ತು. ಚೀನಾ ಮತ್ತು ನೇಪಾಳ ಜಂಟಿಯಾಗಿ ಎವರೆಸ್ಟ್‌ನ ಹೊಸ ಎತ್ತರವನ್ನು ಒಮ್ಮತದಿಂದ ಘೋಷಿಸಿದವು. ಅಂತರರಾಷ್ಟ್ರೀಯ ಗಮನಸೆಳೆದ ಈ ವಿದ್ಯಮಾನ ಪರ್ವತದ ಎತ್ತರದ ಕಾರಣದಿಂದಷ್ಟೇ ಅಲ್ಲ; ಪರ್ವತದುದ್ದಕ್ಕೂ ವ್ಯಾಪಿಸಿಕೊಂಡಿರುವ ರಾಜಕೀಯ ಒಳ ಲೆಕ್ಕಾಚಾರಗಳ ದೃಷ್ಟಿಯಿಂದಲೂ ಮಹತ್ವವಾದುದು. ಎವರೆಸ್ಟ್‌ನ ವೈಚಿತ್ರ್ಯ, ಸ್ವಾರಸ್ಯ, ಎತ್ತರಕ್ಕೆ ಸಂಬಂಧಿಸಿದಂತೆ ಬದಲಾಗುತ್ತಿರುವ ಅಂಕಿಸಂಖ್ಯೆಗಳನ್ನು ಮುಂದಿಡುವ ಈ ವಿಶ್ಲೇಷಣಾತ್ಮಕ ಬರಹ, ಎವರೆಸ್ಟ್ ಆವರಣದಲ್ಲಿ ನಡೆಯುತ್ತಿರುವ ಪ್ರಾಕೃತಿಕ ಬದಲಾವಣೆಗಳ ಬಗ್ಗೆಯೂ ಗಮನಸೆಳೆಯುತ್ತದೆ. 'ರೆಸ್ಟ್ ಇಲ್ಲದ ಎವರೆಸ್ಟ್' ಎನ್ನುವ ಶೀರ್ಷಿಕೆಯ ಈ 'ಸುಧಾ ವಿಶೇಷ', ಭೌತಿಕ ಪರ್ವತದ ಕಥನವಷ್ಟೇ ಆಗಿರದೆ, ಮಾನಸಿಕ ಪರ್ವತಗಳ ಸಂಕಥನವೂ ಆಗಿದೆ.

■ ಟಿ.ಆರ್. ಅನಂತರಾಮು

